ಹೇ ಪ್ರಾಣವೇ, ನೀನೇ ಎಲ್ಲಾ ಪ್ರಕಾರದ ಶಕ್ತಿಗಳಿಂದ ಸಂಪನ್ನನಾದ ಮೂರು ಲೋಕದ ಇಂದ್ರನಾಗಿದ್ದೀಯ. ನೀನೇ ಪ್ರಳಯ ಕಾಲದಲ್ಲಿ ಎಲ್ಲವನ್ನೂ ಸಂಹಾರ ಮಾಡುವ ರುದ್ರನಾಗಿದ್ದೀಯ. ನೀನೇ ಎಲ್ಲರನ್ನು ಅವರ ಯೋಗ್ಯತೆಗೆ ತಕ್ಕಂತೆ ರಕ್ಷಣೆ ಮಾಡುತ್ತೀಯ. ನೀನೇ ಅಂತರಿಕ್ಷದಲ್ಲಿ ಸಂಚರಿಸುವ ವಾಯುವಾಗಿದ್ದೀಯ. ನೀನೇ ಚಂದ್ರ, ಅಗ್ನಿ, ನಕ್ಷತ್ರಗಳಾದಿಯಾದ ಜ್ಯೋತಿರ್ಗಣಗಳ ಸ್ವಾಮಿಯಾದ ಸೂರ್ಯನಾಗಿದ್ದೀಯ.

★★★

ಶಂಭುವಿಗೆ ಅಚ್ಚರಿ ಎನಿಸಿತು.

ನಾಳೆ ಕಾಣಬೇಕಾದ ಪ್ರಭೆ ಇಂದೇ ಗೋಚರಿಸತೊಡಗಿತೇನು? ಆ ಪ್ರಭೆಯನ್ನು ನೋಡುತ್ತಾ ಶಂಭು ಆಲೋಚಿಸಿದ. ಕೆಲವು ವರ್ಷಗಳ ಹಿಂದೆ, ಇದೆಲ್ಲಾ ಸುಳ್ಳು, ಕೆಲವು ಜನ ಕರ್ಪೂರ ಹಚ್ಚಿ ಆ ಪ್ರಭೆಯನ್ನು ಉಂಟುಮಾಡುತ್ತಾರೆ ಎಂದು ಕೂಗಾಡಿದ ನಾಸ್ತಿಕವಾದಿಗಳು ಕೆಲವರು ಅದನ್ನು ತಡೆಯಲು ಹೋದರಂತೆ. ಶುದ್ಧ ಹುಚ್ಚರು. ಹಾಗೆ ಹೋದವರು ತಾವೇ ಭಸ್ಮವಾಗಿ ಹೋದರಂತೆ ಎಂದು ಅಲ್ಲಲ್ಲಿ ಮಾತು ಹರಡಿ ಶಂಭುವಿನ ಕಿವಿಗೂ ಬಿದ್ದಿತ್ತು. ಸ್ವಾಮಿಯನ್ನು ಸಂದೇಹಿಸುವವರು ಎಲ್ಲಾದರೂ ಬದಕಲು ಸಾಧ್ಯವೇ! ಸ್ವಾಮಿ ಎಷ್ಟು ಕರುಣಾಮಯಿಯೋ, ಅಷ್ಟೇ ಪ್ರಬಲ.

ಇಷ್ಟೆಲ್ಲಾ ಯೋಚಿಸುತ್ತಿದ್ದರೂ ಅವನ ದೃಷ್ಟಿ ದಿಗಂತದ ಅಂಚಿನಲ್ಲಿ ಮೂಡಿದ ಆ ಪ್ರಭೆಯನ್ನೇ ದಿಟ್ಟಿಸಿ ನೋಡುತ್ತಿತ್ತು. ಬರಬರುತ್ತಾ ಆ ಪ್ರಭೆ ಪ್ರಕಾಶಮಾನವಾಗುತ್ತಿರುವಂತೆ ಕಂಡಿತು.

ಶಂಭುವಿನ ಹಾಗೆ ಎದ್ದು ಕುಳಿತಿದ್ದ ಕೆಲವರು ಅತ್ತ ಕಡೆ ನೋಡತೊಡಗಿದ್ದರು. ಏನಿದು ಈ ಪ್ರಭೆ?

ದೂರದಲ್ಲೆಲ್ಲೊ ಲಘುವಾಗಿ ಗದ್ದಲ ಕೇಳಿಸಿತು. ನಿಶ್ಶಬ್ದವಾದ ರಾತ್ರಿಯಲ್ಲಿ ಪಶುಪಕ್ಷಿಗಳೂ ಮಲಗಿ ನಿದ್ರಿಸುತ್ತಿರುವಾಗ, ಸ್ವಲ್ಪ ಸ್ವಲ್ಪವಾಗಿ ಕೇಳಿಸುತ್ತಿದ್ದ ಗದ್ದಲ, ನಭೋಮಂಡಲದಲ್ಲಿ ನಿಧಾನವಾಗಿ ಎಂಬಂತೆ ಜೋರಾಗತೊಡಗಿತು.

ಶಂಭುವಿನ ಮೈ ಒಮ್ಮೆ ನಡುಗಿತು. ಬೆಚ್ಚನೆಯ ಅಗ್ನಿಯ ಮುಂದೆ ಕುಳಿತಿದ್ದ ಅವನ ಮೈ ತಣ್ಣಗಾದಂತನಿಸಿತು.

ಹೌದು... ಅದು... ಅದು ಬೆಂಕಿ!

ಬೆಂಕಿ!?

ಎಷ್ಟು ಬೃಹತ್ತಾಗಿದೆ!

ಅಂದರೆ?... ಅಂದರೆ... ಕಾಡಿಗೆ ಬೆಂಕಿಬಿದ್ದಿರಬೇಕು.

ಕಾಡಿಗೆ ಬೆಂಕಿ!

ತಕ್ಷಣ ಶಂಭುವಿನ ದೃಷ್ಟಿ ಮಕ್ಕಳ ಕಡೆ ಹೋಯಿತು. ಇಲ್ಲಿಯವರೆಗೆ ಆನಂದದಿಂದ ಆಟವಾಡಿದ್ದ ಅವರಿಬ್ಬರೂ ಬೆಂಕಿಯ ಸನಿಹದಲ್ಲೇ ನೆಲದ ಮೇಲೆ ಹಾಗೇ ಒರಗಿಕೊಂಡು ನಿದ್ರಿಸುತ್ತಿದ್ದರು. ಅವರ ಮುಖಗಳ ಮೇಲೆ ಇನ್ನೂ ಮುಗುಳುನಗೆ ಮಾಸಿರಲಿಲ್ಲ.

ಶಂಭುವಿನ ಮುಖದ ಮೇಲೆ ಬೆವರು ಹನಿಗಳು ಮೂಡಿದವು. ಅವನ ದೃಷ್ಟಿ ಒಮ್ಮೆ ಕಾಳ್ಗಿಚ್ಚಿನ ಪ್ರಭೆಯ ಕಡೆ, ಮತ್ತೊಮ್ಮೆ ಮಲಗಿ ನಿದ್ರಿಸುತ್ತಿದ್ದ ಹುಡುಗರ ಕಡೆ ಓಲಾಡಿತು.

ಕಾಳ್ಗಿಚ್ಚು ದೂರದಲ್ಲಿದೆ. ಆದರೆ ಜನರ ಗದ್ದಲ ಮಾತ್ರ ಜಾಸ್ತಿಯಾಗಿ ಕೇಳಿಸುತ್ತಿದೆ. ತಾನೀಗ